# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. 81/2020

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀ ರಮೇಶ್ | ಪ್ರಮಾಣ ಮಾಡಿಸಿದ ದಿನಾಂಕಃ | |
| ತಂದೆ/ಗಂಡನ ಹೆಸರು | ಃ | ಶ್ರೀ ಲೇ.ಸಿದ್ದಯ್ಯ | 05.09.2024 | |
| ವಯಸ್ಸು | ಃ | 50 ವರ್ಷ | | |
| ವೃತ್ತಿ | ಃ | ಹೆಚ್.ಸಿ, ಜಯಲಕ್ಷ್ಮಿಪುರಂ ಪೋಲೀಸ್ ಠಾಣೆ | ಪ್ರಾ.ಸಾ. ಃ | 06 |
| ವಾಸಸ್ಥಳ | ಃ | ಮೈಸೂರು | ಚಾ.ಸಾ. ಃ | 17 |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ನಾನು *2016* ರಿಂದ *2023* ರ ತನಕ ನರಸಿಂಹರಾಜ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕೆಲಸ ಮಾಡಿದ್ದೇನೆ. ದಿಃ*07.11.2019* ರಂದು ನನ್ನನ್ನು, ಪಿ.ಸಿ-*708*, ಪಿ.ಸಿ-*34* ಇವರನ್ನು ಬೆಳಗಿನ ಜಾವದ ಕರ್ತವ್ಯಕೊಸ್ಕರ ಇನ್ಸ್ ಪೆಕ್ಟರ್ ಅವರ ಜೀಪಿನಲ್ಲಿ ಗಸ್ತು ಮಾಡಲು ಕರೆದುಕೊಂಡು ಹೋಗಿದ್ದರು ಆ ಕಾಲಕ್ಕೆ ಬೆಳಗ್ಗೆ *7.30* ಕ್ಕೆ ಬಾತ್ಮಿದಾರರು ಇನ್ಸ್ ಪೆಕ್ಟರ್ ಗೆ *3* ದಿನದ ಹಿಂದೆ ಎಲ್.ಐ.ಸಿ ಸರ್ಕಲ್ ಬಳಿ ನಡೆದ ದರೋಡೆ ಪ್ರಕರಣಕ್ಕೆ ಸಂಬಂದಪಟ್ಟ ಆರೋಪಿತರು ತನ್ವೀರ್ ಸೇಠ್ ನಗರದಲ್ಲಿ ಒಂದು ಬ್ರಿಜಾ ಕಾರು, ಒಂದು ಅಪಾಜಿ ಬೈಕ್ ಅನ್ನು ನಿಲ್ಲಿಸಿಕೊಂಡು ನಿಂತಿದ್ದಾರೆ ಎಂದು ಮಾಹಿತಿ ತಿಳಿಸಿದ್ದರು. ಆಗ ಇನ್ಸ್ ಪೆಕ್ಟರ್ ನಮ್ಮನ್ನು ಕರೆದುಕೊಂಡು ತನ್ವೀರ್ ಸೇಠ್ ನಗರಕ್ಕೆ ಹೋಗಿ ನೋಡಿದಾಗ ಅಲ್ಲಿ *3* ಜನ ವ್ಯಕ್ತಿಗಳು ನಿಂತಿದ್ದರು ನಾವು ಅವರನ್ನು ಹಿಡಿಯಲು ಪ್ರಯತ್ನಿಸಿದಾಗ ಇಬ್ಬರು ತಪ್ಪಿಸಿಕೊಂಡಿದ್ದರು ಒಬ್ಬರನ್ನು ಹಿಡಿದುಕೊಂಡಿದ್ದೆವು ಆ ಕಾಲಕ್ಕೆ ಬೆಳಗ್ಗೆ *8*

ಗಂಟೆಯಾಗಿತ್ತು. ಹಿಡಿದುಕೊಂಡ ವ್ಯಕ್ತಿಯನ್ನು ವಿಚಾರಿಸಿದಾಗ ಅತನ ಹೆಸರು ಮಹಮದ್ ಸಿದ್ದಿಕ್ ಅಲಿಯಾಸ್ ಮೌಲ್ವಿ ವಾಸ ಗೌಸಿಯಾನಗರ ಎಂದು ಹೇಳಿದ್ದ. ಓಡಿ ಹೋದವರ ಹೆಸರು ಮಹಮದ್ ಯಾಸಿನ್ ಅಲಿಯಾಸ್ ಇಮ್ರಾನ್ ಮತ್ತು ಅಬ್ಬಾಜ್ ಪಾಷ ಎಂದು ತಿಳಿಸಿದ್ದ. ಓಡಿ ಹೊಗುತ್ತಿದ್ದ ಬಗ್ಗೆ ಕೇಳಿದಾಗ *3* ದಿನಗಳ ಹಿಂದೆ ತಾವು ಒಟ್ಟು *5* ಜನ ವ್ಯಕ್ತಿಗಳು ಸೇರಿ ಎಲ್.ಐ.ಸಿ ಸರ್ಕಲ್ ಬಳಿ ಬೆಳಗ್ಗೆ *11.15* ರ ಸಮಯದಲ್ಲಿ ಬೈಕ್ ನಲ್ಲಿ ಹೊಗುತ್ತಿದ್ದ ವ್ಯಕ್ತಿಯನ್ನು ಅಡ್ಡ ಗಟ್ಟಿ ಅವನಿಂದ *85* ಸಾವಿರ ಕಿತ್ತುಕೊಂಡ ಬಗ್ಗೆ ತಿಳಿಸಿದ್ದ. ಆಗ ಇನ್ಸ್ ಪೆಕ್ಟರ್ ಆ ವ್ಯಕ್ತಿ ಮೊ.ಸಂಖ್ಯೆ *141/2019* ಕ್ಕೆ ಸಂಬಂದಪಟ್ಟ ವ್ಯಕ್ತಿ ಎಂದು ವಶಪಡಿಸಿಕೊಂಡಿದ್ದರು. ಆ ವ್ಯಕ್ತಿಯ ಅಂಗ ಶೋಧನೆ ಮಾಡಿದಾಗ ಆತನ ಬಳಿ *2,500/-* ಹಣ ದೊರೆತಿತ್ತು. ಆ ಹಣ ಎಲ್.ಐ.ಸಿ ಸರ್ಕಲ್ ಬಳಿ ಸುಲಿಗೆ ಮಾಡಿದ್ದ ಹಣ ಎಂದು ತಿಳಿಸಿದ್ದ. ಆಗ ಅಲ್ಲಿಯೇ ಇದ್ದ ಇಬ್ಬರು ಸಾರ್ವಜನಿಕರನ್ನು ಕರೆಸಿ ಅವರಿಗೆ ವಿಷಯ ತಿಳಿಸಿ ಪಂಚರಾಗಿ ಬರುವಂತೆ ತಿಳಿಸಿದಾಗ ಅವರು ಒಪ್ಪಿದ್ದರು. ಬೆಳಗ್ಗೆ *8.45* ರಿಂದ *9.45* ರ ತನಕ ಮಹಜರ್ ಮಾಡಿ *2,500/-* ನಗದು ಹಣ, ಕಾರು ಮತ್ತು ಬೈಕ್ ಅನ್ನು ವಶಕ್ಕೆ ಪಡೆದಿದ್ದರು. ಕಾರಿನ ಸಂಖ್ಯೆ ಕೆಎ*-03-*ಎ.ಎಫ್*- 6347* ಇತ್ತು. ಬೈಕ್ ಗೆ ನಂಬರ್ ಇರಲಿಲ್ಲ. ನಂತರ ಹಿಡಿದುಕೊಂಡ ವ್ಯಕ್ತಿಯನ್ನು ಕರೆದುಕೊಂಡು ಅಮಾನತ್ತು ಪಡಿಸಿಕೊಂಡ ಎಲ್ಲಾ ವಸ್ತುಗಳನ್ನು ತೆಗೆದುಕೊಂಡು ಠಾಣೆಗೆ ವಾಪಸ್ಸು ಬಂದಿದ್ದೇವು. ಈಗ ನಾನು ನೋಡುತ್ತಿರುವ ಪೊಟೋಗಳಲ್ಲಿ ಕಾಣುವ ವಾಹನಗಳು ಆ ದಿನ ಅಮಾನತ್ತು ಪಡಿಸಿಕೊಂಡ ವಾಹನಗಳು ಇವೆ. ಸದರಿ ಪೊಟೋಗಳನ್ನು ನಿ.ಪಿ*-7* ರಿಂದ *12* ಎಂದು ಗುರುತಿಸಿದೆ. ಆ ದಿನ ಅಮಾನತ್ತು ಪಡಿಸಿಕೊಂಡ ಹಣವನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ *2,500/-* ನಗದು ಹಣ ಆ ದಿನ ಮಹಮದ್ ಸಿದ್ದಿಕ್ ಎನ್ನುವ ಆರೋಪಿತನಿಂದ ವಶಕ್ಕೆ ಪಡೆದ

ಹಣ ಇರುತ್ತದೆ. ಸದರಿ ಹಣವನ್ನು ಎಂ.ಓ-2 ಎಂದು ಗುರುತಿಸಿದೆ. ಕೋರ್ಟ್ ಮುಂದೆ ಇರುವ *4* ನೇ ಆರೋಪಿತ ಆ ದಿನ ನಾನು ಹಿಡಿದುಕೊಂಡಿದ್ದ ಮಹಮದ್ ಸಿದ್ದಿಕ್ ಇರುತ್ತಾನೆ.

*2.* ದಿಃ*16.01.2020* ರಂದು ಇನ್ಸ್ ಪೆಕ್ಟರ್ ನನ್ನನ್ನು, ಪಿ.ಸಿ-*34* ಮಂಜುನಾಥ ಮತ್ತು ಪಿ.ಸಿ-*1154*-ಸುನೀಲ್ ಕುಮಾರ್ ಇವರನ್ನು ಮೊ.ಸಂಖ್ಯೆ *141/2019* ಪ್ರಕರಣದಲ್ಲಿನ ಆರೋಪಿತರ ದಸ್ತಗಿರಿ ಮಾಡಲು ನೇಮಕ ಮಾಡಿದ್ದರು. ಆ ಕಾಲಕ್ಕೆ ನಾವು ಉದಯಗಿರಿ ಪೋಲೀಸ್ ಠಾಣೆಯ ಬೇರೆ ಬೇರೆ ಸ್ಥಳಗಳಲ್ಲಿ ಗಸ್ತು ಮಾಡಿ ಸಂಜೆ *4.30* ರ ಸಮಯದಲ್ಲಿ ಬಾತ್ಮಿದಾರರು ಆರೋಪಿತರು ಭಾರತ್ ನಗರದ ಬಸ್ ನಿಲ್ದಾಣದ ಬಳಿ ಇದ್ದಾರೆ ಎಂದು ತಿಳಿಸಿದ್ದರು ಆಗ ನಾವು ಅಲ್ಲಿ ಹೋಗಿ ನೋಡಿದಾಗ ಅಲ್ಲಿ ಇಬ್ಬರು ವ್ಯಕ್ತಿಗಳು ಇದ್ದರು ನಾವು ಅವರನ್ನು ಹಿಡಿದುಕೊಂಡು ಅವರ ಹೆಸರು ಕೇಳಿದಾಗ ಅವರ ಹೆಸರು ಅರ್ಬಾಜ್ ಮತ್ತು ಮಹಮದ್ ಯಾಸಿನ್ ಅಲಿಯಾಸ್ ಇಮ್ರಾನ್ ಎಂದು ಹೇಳಿದ್ದರು. ಯಾವ ಕಾರಣಕ್ಕೆ ನಮ್ಮನ್ನು ಕಂಡು ಓಡಿಹೊಗುತ್ತಿದ್ದೀರಿ ಎಂದು ಕೇಳಿದಾಗ ಅವರು ಒಂದು ತಿಂಗಳ ಹಿಂದೆ ಎಲ್.ಐ.ಸಿ ಸರ್ಕಲ್ ಬಳಿ ಸ್ಕೂಟರ್ ನಲ್ಲಿ ಹೊಗುವವರನ್ನು ಅಡ್ಡ ಹಾಡಿ *85* ಸಾವಿರ ಹಣ ಕಿತ್ತುಕೊಂಡಿದ್ದಾಗಿ ಹೇಳಿದ್ದರು. ಆ ಕಾಲಕ್ಕೆ ಆ ಇಬ್ಬರನ್ನು ಠಾಣೆಗೆ ಕರೆದುಕೊಂಡು ಬಂದು ಇನ್ಸ್ ಪೆಕ್ಟರ್ ಮುಂದೆ ಹಾಜರುಪಡಿಸಿ ವರದಿ ನೀಡಿದ್ದೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿ.ಪಿ-*13* ಮತ್ತು ಸಹಿಯನ್ನು ನಿಪಿ-*13*(ಎ) ಎಂದು ಗುರುತಿಸಿದೆ. ಈ ದಿನ ಕೋರ್ಟ್ ಮುಂದೆ ಇರುವ *2* ನೇ ಆರೋಪಿತ ಆ ದಿನ ನಾನು ಹಿಡಿದುಕೊಂಡಿದ್ದ ವ್ಯಕ್ತಿಗಳ ಪೈಕಿ ಅರ್ಬಾಜ್ ಇರುತ್ತಾನೆ. ಇನ್ನೊಬ್ಬ ಮಹಮದ್ ಯಾಸಿನ್ ಅಲಿಯಾಸ್ ಇಮ್ರಾನ್ ಅನ್ನು ಸಹ ನೋಡಿದರೆ ಗುರುತಿಸುತ್ತೇನೆ.

<u>ಪಾಟೀ ಸವಾಲು : 1 ರಿಂದ 3 ನೇ ಆರೋಪಿ ಪರ ವಕೀಲರಾದ ಶ್ರೀ ಎಂ.ಎಸ್ ರವರಿಂದಃ-</u>

*3.* ದಿಃ*16.01.2020* ರಂದು ಆರೋಪಿತರ ಪತ್ತೆಗೆ ನೇಮಿಸಿದಾಗ ನಮಗೆ ಆರೋಪಿತರ ಪೊಟೋಗಳನ್ನು ಕೊಟ್ಟಿರಲಿಲ್ಲ. ಆ ದಿನಕಿಂತ ಮೊದಲು ನಾನು ಆ ಆರೋಪಿತರನ್ನು ಬೇರೆ ಎಲ್ಲಿಯೂ ನೋಡಿರಲಿಲ್ಲ. ತನಿಖಾಧಿಕಾರಿಗಳು ಆರೋಪಿತರ ಹೆಸರುಗಳನ್ನು ಮಾತ್ರ ಹೇಳಿದ್ದರು ಆದರೆ ಗುರುತು ಚಹರೆ ಬಗ್ಗೆ ಹೇಳಿರಲಿಲ್ಲ. ಆರೋಪಿತರ ವಿಳಾಸಗಳನ್ನು ಅಜೀಜ್ ಸೇಠ್ ನಗರ, ಗೌಸಿಯಾ ನಗರ, ರಾಜೀವ ನಗರ ಎಂದು ಹೇಳಿದ್ದರು. ಆ ದಿನ ನಮಗೆ ಆರೋಪಿತರ ಮನೆ ಎಲ್ಲಿ ಎಂದು ಗೊತ್ತಿರಲಿಲ್ಲ ಆದರೆ ಆ ಏರಿಯಾಗಳಿಗೆ ಗಸ್ತಿಗೆ ಹೋಗಿದ್ದೆವು. ನಾವು ರಾಜೀವನಗರ *1* ನೇ ಸ್ಟೇಜ್ ಮುಖ್ಯ ರಸ್ತೆಯಲ್ಲಿದ್ದಾಗ ಬಾತ್ಮಿದಾರರು ಮಾಹಿತಿ ಕೊಟ್ಟಿದ್ದರು. ರಾಜೀವನಗರದಿಂದ ಭಾರತ್ ನಗರದ ಬಸ್ ನಿಲ್ದಾಣ *1–1 ½* ಕಿ.ಮೀ ಆಗುತ್ತದೆ. ಆ ದಿನ ನಾವು ಮಫ್ತಿಯಲ್ಲಿದ್ದವು. ನಾವು ಎರಡು ಬೈಕ್ ಗಳಲ್ಲಿ ಅಲ್ಲಿಗೆ ಹೋಗಿದ್ದೆವು. ಭಾರತ್ ನಗರದ ಬಸ್ ನಿಲ್ದಾಣ ಮಹದೇವಪುರದ ರಸ್ತೆಯಲ್ಲಿದೆ ಎಂದರೆ ನಿಜ. ಸಾತಗಳ್ಳಿ ಬಸ್ ನಿಲ್ದಾಣದಿಂದ ಭಾರತ್ ನಗರದ ಬಸ್ ನಿಲ್ದಾಣದ ವರೆಗೆ ರಸ್ತೆ ನೇರವಾಗಿದೆ ಎಂದರೆ ನಿಜ. ಭಾರತ್ ನಗರದಲ್ಲಿ ಬಸ್ ನಿಲ್ದಾಣ ಒಪನ್ ಇದೆ. ಆ ಬಸ್ ನಿಲ್ದಾಣದಿಂದ ಸಾತಗಳ್ಳಿ ಬಸ್ ನಿಲ್ದಾಣದ ವರೆಗೆ ಯಾರು ಬರುತ್ತಾರೆ ಎಂದು ಕಾಣುತ್ತದೆ ಎಂದರೆ ಸರಿಯಲ್ಲ. ಆ ದಿನ ನಾವು ಆರೋಪಿತರ ಹತ್ತಿರಕ್ಕೆ ಹೋದಾಗಲೇ ಅವರ ಬಗ್ಗೆ ಗೊತ್ತಾಗಿತ್ತು. ಆ ದಿನ ಬಸ್ ನಿಲ್ದಾಣದಲ್ಲಿ ಬೇರೆ ಜನರು ಇದ್ದರು. ಆ ದಿನ ಆರೋಪಿತರು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನ ಮಾಡಿದ್ದರು. ನಾವು ಬೈಕ್ ಅನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ಆರೋಪಿತರನ್ನು ಹಿಡಿದುಕೊಂಡಿದ್ದೆವು. ಆ ದಿನ ಭಾರತ್ ನಗರದ ಬಸ್ ನಿಲ್ದಾಣದ ಬಳಿ ಅರ್ಬಾಜ್ ಮತ್ತು ಮಹಮದ್ ಯಾಸಿನ್ ಅಲಿಯಾಸ್ ಇಮ್ರಾನ್ ಇವರನ್ನು

ಹಿಡಿದುಕೊಂಡಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆಟೋದಲ್ಲಿ ಅವರನ್ನು ಠಾಣೆಗೆ ಕರೆದುಕೊಂಡು ಹೋಗಿದ್ದೆವು. ಠಾಣೆಗೆ ಹೋಗುವ ಮೊದಲು ಆರೋಪಿತರ ಕುಟುಂಬದವರಿಗೆ ಮಾಹಿತಿ ಕೊಟ್ಟಿರಲಿಲ್ಲ. ಮನೆಯಲ್ಲಿದ್ದವರನ್ನು ಕರೆದುಕೊಂಡು ಹೋಗಿ ಈ ಪ್ರಕರಣಕ್ಕೆ ಅಳವಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

***4 ನೇ ಆರೋಪಿತರ ಪರ ವಕೀಲರು ಗೈರುಹಾಜರಿದ್ದು 4 ನೇ ಆರೋಪಿತರು 1 ರಿಂದ 3 ನೇ ಆರೋಪಿತರ ಪರ ವಕೀಲರ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಹೇಳುತ್ತಾರೆ.***

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*